ಹಿಡಿದು ಕೂತು... ಓದ್ತಾನೆ ಇರ್ತಾನೆ ಸರ್. ಅವನು ಅಪಾರ್ಟ್‌ಮೆಂಟ್‌ನಿಂದ ಕೆಳಗಿಳಿದು ಹೋಗೋದೆ ಕಡಿಮೆ. ಅವನಿಗೆ ಅಲ್ಲಿ ಯಾರೂ ಗೆಳೆಯರಿಲ್ಲ. ಆತ ಹೋದರೆ ಶಾಲೆಗೆ; ಶಾಲೆಯಿಂದ ಮನೆಗೆ ಬಂದವ ರಾತ್ರಿ ನಾನು ಮನೆಗೆ ಹಿಂದಿರುಗುವ ಹೊತ್ತಿಗೆಲ್ಲ ಮತ್ತೆ ಪುಸ್ತಕ ಹಿಡಿದು ಕೂತಿರುತ್ತಾನೆ. ಆದರೆ ಏನು ಪ್ರಯೋಜನ ಸರ್? ಗಣಿತವಂತು ಒಂದೂ ಅವನ ತಲೆಗೆ ಹೋಗುವುದೇ ಇಲ್ಲ... ಮಗ್ಗಿಯಂತೂ ಇಲ್ಲವೇ ಇಲ್ಲ... ವಿಚಿತ್ರದಲ್ಲಿ ವಿಚಿತ್ರ ಸರ್...'

'...ಗಣಿತ ಒಂದೂ ಅವನ ತಲೆಗೆ ಹೋಗಲ್ಲ ಅಂತಾ ನಿಮ್ಗೆ ಹೇಗೆ ಗೊತ್ತಾಯ್ತು?...'

'ಮಗ್ಗಿ ಕೇಳಿದ್ರೆ... ಎಲ್ಲಾ ಅಪ್ನಿಗೆ ತೋಚಿದ್ದು ಹೇಳ್ತಾನೆ..., ಅದ್ರಲ್ಲೂ ಮೂರರ ಮಗ್ಗಿಯನ್ನು ಹತ್ತಾರು ಸಲ ಉರು ಹೊಡಿಸಿ, ಮತ್ತೆ ಮತ್ತೆ ಕೇಳಿದರೆ ತ್ರೀ ಒನ್ ಝುರ್ ತ್ರಿ, ತ್ರೀ ಟು ಝುರ್ ಫೈವ್, ತ್ರೀ ತ್ರೀ ಝುರ್ ಸಿಕ್ಸ್, ತ್ರೀ ಫೋರ್ ಝುರ್ ಸೆವೆನ್, ತ್ರೀ ಫೈವ್ ಝುರ್ ಎೈಟ್... ಹೀಗೆ ವಿಚಿತ್ರವಾಗಿ ಮಗ್ಗಿ ಹೇಳ್ತಾನೆ ಸರ್...'

'ಹೌದೇನಮ್ಮ?!... ತಾಯಿಯಾಗಿ ನಿಮಗೇನನಿಸುತ್ತಮ್ಮ' ಎಂದು ಡಾ. ವಾಹೀದ್ ಅವರು ಅಕ್ಷಯಕುಮಾರನನ್ನು ಬಿಟ್ಟು ಕುಮುದಳನ್ನು ಪ್ರಶ್ನಿಸಿದಾಗ 'ಸರ್, ನಿಜ ಹೇಳ್ಬೇಕಂದ್ರೆ... ಅವನನ್ನು ಸೇರಿಸಿದ ಆ ನರ್ಸರಿ ಶಾಲೆನೇ ಸರಿ ಇಲ್ಲ ಸರ್; ಅಪ್ನಿಗೆ ಮಗ್ಗಿ ಕಲಿಸುವ ಟೀಚರಿದ್ದು ಟೀಚಿಂಗ್ ಕ್ರಮವೇ ಸರಿ ಇಲ್ಲ ಸರ್; ಇವ್ರನ್ನ ಸಾಕಷ್ಟು ಬಾರಿ ಕೇಳಿಕೊಂಡೆ... ಒಮ್ಮೆ ಅಪ್ನ ಶಾಲೆಗೆ ಹೋಗಿ ಹೆಡ್ಮಾಸ್ಟ್ರನ್ನು ಕಂಡು ಅವನ ಟೀಚರ್ ಬದಲಾಯಿಸಕ್ಕೆ ಹೇಳಿ... ಅಂತಾ. ಆದ್ರೆ ಇವ್ರು ಆ ಕಡೆ ಒಮ್ಮೆನೂ ತಲೆ ಹಾಕಿಲ್ಲ; ಮನೆಯಲ್ಲೇ ಆ ಮಗುವಿನ ಪ್ರಾಣ ತಿಂತಾರೆ ಸರ್.'

'ನೀವು ಅವನ ತಪ್ಪನ್ನು ಸರಿ ಮಾಡ್ಬಹುದಲ್ವಮ್ಮ... ಸರಿಯಾದ ಕ್ರಮದಲ್ಲಿ ಅವನಿಗೆ ಮಗ್ಗಿ ಕಲಿಸ್ಬಹುದಲ್ವ?'

'ಇಲ್ಲ ಸರ್... ಇವ್ರು ನನ್ನ ಕಲಿಸಕ್ಕೇ ಬಿಡಲ್ಲ, 'ನಾನು ಸಯನ್ಸ್ ಪೋಸ್ಟ್ ಗ್ರಾಜುಯೇಟ್, ಈಗಿನಿಂದಲೇ ಅಪ್ನ ಬೇಸಿಕ್ ನಾನೇ ಸರಿ ಮಾಡ್ಬೇಕು... ಸಯನ್ಸ್, ಮ್ಯಾಥ್ಸ್ ಈಗ್ಲೇ ಅಪ್ನಿಗೆ ಚೆನ್ನಾಗಿ ಕಲಿಸ್ಬೇಕು...' ಅಂತಾ ಸದಾ ಇವ್ರೆ ಅಪ್ನಿಗೆ ಮಗ್ಗಿ ಕಲಿಸೋದು. ಇವ್ರು ಮಗ್ಗಿ ಎತ್ಕೊಂಡ್ರೆ ಸಾಕು... ಆತ ಎಲ್ಲಾ ಉಲ್ಟಾ ಹೇಳೋದು ಅಥವಾ ಏನೇನೋ ಸೇರ್ಸಿ ಹೇಳೋದು. ಸರಿ, ಮತ್ತೆ ಅಪ್ನಿಗೆ ಹೊಡೆತ... ಹೊಡೆತ... ಹೊಡೆತ..., ಮತ್ತೆ ನಮ್ಮಿಬ್ಬರ ನಡುವೆ ಜಗಳ...'

ಕುಮುದಳ ಮಾತು ಕೇಳಿ ಡಾ. ವಾಹೀದ್ ಅವರ ತುಟಿಯಲ್ಲಿ ಕಿರುನಗೆ ಮೂಡಿತ್ತು. 'ಹಾಗಾದ್ರೆ... ಅಪ್ನಿಗೆ ಮಗ್ಗಿ ಬರದಿದ್ರೆ, ನಿಮ್ಮ ಪ್ರಶ್ನೆಗಳಿಗೆ ಅಪ್ನು ಕ್ರಮಬದ್ಧವಾಗಿ ಉತ್ತರಿಸದಿದ್ರೆ... ಅಪ್ನು ಬುದ್ಧಿಮಾಂದ್ಯ ಅಂತ ನಿಮ್ಮ ಅಭಿಪ್ರಾಯವಾ...' ಅಂತ ಡಾ. ವಾಹೀದ್ ಅವರು ಅಕ್ಷಯ್‌ಕುಮಾರನನ್ನು ಪ್ರಶ್ನಿಸಿದ್ರೆ –

'ಅಲ್ಲ ಸರ್, ನಮ್ಗೂ... ಪೇರೆಂಟ್ಸ್ ಆಗಿ ಒಂದು ಆಸೆ ಇರುತ್ತಲ್ವಾ? ಸರ್, ಅಪ್ನು ಏನೋ ಆಗ್ಬೇಕು ಅಂತ ನಾನು ಕನಸು ಕಂಡ್ರೆ ತಪ್ಪಾ ಸರ್? ಕಲಿ ಮಗ್ನೆ... ಕಲೀ, ಕಲ್ತು ದೊಡ್ಡವನಾಗು, ದೊಡ್ಡ ಡಾಕ್ಟ್ರ ಆಗು... ಸಾಫ್ಟ್‌ವೇರ್ ಎಂಜಿನಿಯರ್ ಆಗು... ಅಂತಾ ನಾನು ಹೇಳಿದ್ರೆ ಅವನು ಎಲ್ಲದಕ್ಕೂ ತಲೆ ಆಡಿಸೋನು, ಎದ್ದು ಬಿದ್ದು ಓದೋನು. ಆದ್ರೂ ಗಣಿತ, ವಿಜ್ಞಾನದಲ್ಲಿ ಹತ್ತು ಹನ್ನೆರಡು ಮಾರ್ಕ್ಸ್ ಬಂದ್ರೆ ನಾವು ಏನನ್ಕೋಬೇಕು ಸರ್? ಮಾರ್ಕ್ಸ್ ಹೋಗ್ಲೀ ಅತ್ಲಾಗೆ... ಜೀವ ಹಿಂಡಿಕೊಂಡು ನೂರು ಬಾರಿ 'ತ್ರೀ ಫೋರ್ ಝುರ್ ಎಷ್ಟು?' ಅಂತ ಕೇಳಿದ್ರೆ 'ನೈನ್' ಅಂತಾನೇ ಹೇಳೋನು ಸರ್... ನಾನಾಗ ಏನಂದ್ಕೋಬೇಕು ಹೇಳಿ ಅವನನ್ನ...'

'ಆತನಿಗೆ ಮಗ್ಗಿ ಬರೋದೆ ಇಲ್ಲ ಅನ್ನೋದು, ಅಪ್ನಿಗೆ ಮೂರರ ಮಗ್ಗೀ ಕಲಿಸುವಾಗ ನಿಮ್ಗೆ